# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ
ಹಂತ, ಹಿನಕಲ್, ಮೈಸೂರು-
5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seeommys@gmail.com

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2017-18/ ಲ್ಯಾ - ೨೧ ದಿನಾಂಕ: 02.06.2017

## ಸಭೆಯ ನಡಾವಳಿಗಳು

ದಿನಾಂಕ 24/05/2017 ರಂದು ಹನೂರು ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ.ರಾಮಚಂದ್ರ : ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮೈಸೂರು.
2. ಶ್ರೀಮತಿ.ತಾರ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮೈಸೂರು.
3. ಶ್ರೀ.ರಾಮಾಸ್ವಾಮಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ ಕಛೇರಿ, ಕೊಳ್ಳೇಗಾಲ.
4. ಶ್ರೀ.ಟಿ.ವಿಜಯಕುಮಾರ್ : ಲೆಕ್ಕಾಧಿಕಾರಿ, ವಿಭಾಗ ಕಛೇರಿ, ಕೊಳ್ಳೇಗಾಲ.
5. ಶ್ರೀಮತಿ.ಜೆ.ದೀಪಾ ಗಾಂಧಿ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹನೂರು ಉಪವಿಭಾಗ.
6. ಶ್ರೀ.ವಿಶ್ವನಾಥ್ : ಸಹಾಯಕ ಇಂಜಿನಿಯರ್(ವಿ), ಹನೂರು ಶಾಖೆ, ಹನೂರು ಉಪವಿಭಾಗ.
7. ಶ್ರೀ.ಬಿ.ರಂಗಸ್ವಾಮಿ : ಸಹಾಯಕ ಇಂಜಿನಿಯರ್(ವಿ), ಲೊಕ್ಕನಹಳ್ಳಿ ಶಾಖೆ, ಹನೂರು ಉಪವಿಭಾಗ.
8. ಶ್ರೀ.ಟಿ.ಸಂತೋಷ್ : ಕಿರಿಯ ಇಂಜಿನಿಯರ್(ವಿ), ರಾಮಾಪುರ ಶಾಖೆ, ಹನೂರು ಉಪವಿಭಾಗ.
9. ಶ್ರೀ.ಬಿ.ಬಿ.ನಾಗರಾಜು : ಪ್ರಭಾರ ಕಿರಿಯ ಇಂಜಿನಿಯರ್(ವಿ), ಕೌದಳ್ಳಿ ಹಾಗೂ ಮಹದೇಶ್ವರ ಬೆಟ್ಟ ಶಾಖೆ, ಹನೂರು ಉಪವಿಭಾಗ.
10. ಶ್ರೀ.ಕೆ.ಎಸ್.ನಾಗಭೂಷಣ : ಪ್ರಭಾರ ಹಿರಿಯ ಸಹಾಯಕ, ಕಂದಾಯ ಶಾಖೆ, ಹನೂರು ಉಪವಿಭಾಗ.

ಸಭೆಯಲ್ಲಿ ಹನೂರು ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ಸಭೆಯಲ್ಲಿ ಗ್ರಾಹಕರು ತಿಳಿಸಿದ ಸಮಸ್ಯೆಗಳು | ಅಧ್ಯಕ್ಷತೆ ವಹಿಸಿದ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ರವರು ಗ್ರಾಹಕರಿಗೆ ನೀಡಿದ ಉತ್ತರ |
|---|---|---|---|
| 1 | ವೆಂಕಟೇಗೌಡ, ಕಣ್ಣೂರು | 100 ಕೆವಿಎ ಪರಿವರ್ತಕವು ವಿಫಲಗೊಂಡು ಸುಮಾರು 10 ದಿನಗಳು ಆಗಿದ್ದು ಸಂಬಂಧಪಟ್ಟ ಮಾರ್ಗದಾಳುವಿಗೆ ಮಾಹಿತಿ ನೀಡಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. | ವಿಭಾಗೀಯ ಉಗ್ರಾಣದಲ್ಲಿ ಪರಿವರ್ತಕಗಳ ಲಭ್ಯತೆ ಇಲ್ಲದೆ ಇರುವ ಪ್ರಯುಕ್ತ ತಕ್ಷಣಕ್ಕೆ ಪರಿವರ್ತಕ ಬದಲಾಯಿಸಲು ಸಾಧ್ಯವಾಗಿರುವುದಿಲ್ಲ, ಮುಂದಿನ 2 ದಿನಗಳಲ್ಲಿ ವಿಫಲಗೊಂಡ ಪರಿವರ್ತಕವನ್ನು ಬದಲಾಯಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು. |

ಚಾ.ವಿ.ಸ.ನಿ.ನಿ. ನಿಗಮ ಕಾರ್ಯಾಲಯ ನಂ. 394 ತಾ: 12/6/17 ಸರಸ್ವತಿಪುರಂ, ಮೈಸೂರು

| | | | |
|---|---|---|---|
| 2 | ಕರಿಯಪ್ಪ, ಅಧ್ಯಕ್ಷರು, ರೈತ ಸಂಘ, ಚಂಗಡಿ | ಕಳೆದ 03 ದಿನಗಳಿಂದ ನಮ್ಮ ಗ್ರಾಮಕ್ಕೆ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದ್ದು ಇದುವರೆವಿಗೂ ಕ್ರಮ ಕೈಗೊಂಡಿರುವುದಿಲ್ಲ, ಹಾಗೂ ಇನ್ಸುಲೇಟರ್‌ಗಳು ಕಳಪೆಯಾಗಿದ್ದು ಅವುಗಳನ್ನು ಬದಲಾಯಿಸಬೇಕು, ಮಾಪಕ ಓದುಗರು ಪ್ರತಿ ತಿಂಗಳು ರೀಡಿಂಗ್ ನೀಡುತ್ತಿರುವುದಿಲ್ಲ, ವಿದ್ಯುತ್ ಮಾರ್ಗದಲ್ಲಿ ಸಮಸ್ಯೆಯಾಗಿದ್ದರೂ ಯಾವುದೇ ಮಾರ್ಗದಾಳುಗಳು ಕ್ರಮ ಕೈಗೊಂಡಿರುವುದಿಲ್ಲ. ಕೆಲವು ಕಡೆಗಳಲ್ಲಿ ಕಬ್ಬಿಣದ ಕಂಬಗಳಿದ್ದು ಅವುಗಳನ್ನು ಬದಲಾಯಿಸಲು ಕ್ರಮ ಕೈಗೊಂಡಿರುವುದಿಲ್ಲ. | ದಿನಾಂಕ:24.05.2017 ರಂದು ವಿದ್ಯುತ್ ಮಾರ್ಗವನ್ನು ಸರಿಪಡಿಸಿ ವಿದ್ಯುತ್ ಸರಬರಾಜು ನೀಡಲಾಗಿರುತ್ತದೆ. ಇನ್ಸುಲೇಟರ್‌ಗಳ ಬದಲಾವಣೆಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಪಾಲಿಮರ್ ಇನ್ಸುಲೇಟರ್‌ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು. ರೀಡಿಂಗ್ ನೀಡಲು ವಾಹನದ ವ್ಯವಸ್ಥೆ ಇಲ್ಲದೆ ಇರುವುದರಿಂದ ರೀಡಿಂಗ್ ಸಾಧ್ಯವಾಗಿರುವುದಿಲ್ಲ, ಮುಂದಿನ ದಿನಗಳಲ್ಲಿ ವಾಹನದ ಸೌಲಭ್ಯವನ್ನು ಒದಗಿಸಿ ರೀಡಿಂಗ್ ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. ಕಬ್ಬಿಣದ ಕಂಬಗಳನ್ನು ಬದಲಾಯಿಸಲು ಹಾಗೂ ವಿದ್ಯುತ್ ಮಾರ್ಗಗಳಲ್ಲಿ ಸಮಸ್ಯೆ ಕಾಣಿಸಿಕೊಂಡಾಗ ತಕ್ಷಣ ದುರಸ್ಥಿ ಕಾರ್ಯ ಕೈಗೊಳ್ಳಲು ವಾಹನದ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲಿ ಕಲ್ಪಿಸಲಾಗುವುದೆಂದು ತಿಳಿಸಲಾಯಿತು. |
| 3 | ಮದಲೈಮುತ್ತು, ಎಂ.ಜಿ.ದೊಡ್ಡಿ | KOWIP-172ರ ಹೆಸರು ಬದಲಾವಣೆಯಾಗಿದ್ದು ಸರಿಪಡಿಸಲು ಕೋರಿರುತ್ತಾರೆ. | ಪ್ರಭಾರ ಹಿರಿಯ ಸಹಾಯಕ, ಕಂದಾಯ ಶಾಖೆರವರಿಗೆ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಹಕರು ನೀಡಿರುವ ದಾಖಲಾತಿಯನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| 4 | ಮಾದಪ್ಪ, ಎಂ.ಜಿ.ದೊಡ್ಡಿ | ಸಕ್ರಮಗೊಂಡಿರುವ ಪಂಪು ಸೆಟ್ಟುಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. | ಈಗಾಗಲೇ ಸಕ್ರಮಗೊಂಡಿರುವ ಪಂಪು ಸೆಟ್ಟುಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗೆ ಟೆಂಡರ್ ನೀಡಲಾಗಿದ್ದು ಜ್ಯೇಷ್ಠತಾ ಆಧಾರದಲ್ಲಿ ಕಾಮಗಾರಿಯನ್ನು ಕೈಗೊಳ್ಳುವಂತೆ ಗುತ್ತಿಗೆದಾರರಿಗೆ ಮಾರ್ಗದರ್ಶನ ನೀಡಲಾಗುವುದೆಂದು ತಿಳಿಸಲಾಯಿತು. |
| 5 | ಗುರುಸ್ವಾಮಿ, | ನೀರಾವರಿ ಪಂಪುಸೆಟ್ಟುಗಳಿಗೆ ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗದವರಿಗೆ ನಿಗಮದ ವತಿಯಿಂದ ಉಚಿತವಾಗಿ ಸೋಲಾರ್ ಅಳವಡಿಸಲು ಕೋರಿರುತ್ತಾರೆ. | ಪ್ರಸ್ತುತ ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗದವರ ನೀರಾವರಿ ಪಂಪುಸೆಟ್ಟುಗಳಿಗೆ ಉಚಿತವಾ ಸೋಲಾರ್ ಅಳವಡಿಸುವ ಕೋಟಾ ಮುಕ್ತಾಯವಾಗಿದ್ದು ಮುಂದಿನ ದಿನಗಳಲ್ಲಿ ಅರ್ಜಿ ಸಲ್ಲಿಸಲು ಸೂಚಿಸಲಾಯಿತು. |
| 6 | ಮಹೇಂದ್ರಗುರು, ಕಣ್ಣೂರು | ಕಣ್ಣೂರು ಗ್ರಾಮದಲ್ಲಿ ಕೆಲವು ಕಡೆಗಳಲ್ಲಿ ವಾಹಕವು ಜೋತು ಬಿದ್ದಿದ್ದು ಸರಿಪಡಿಸಲು ಕೋರಿರುತ್ತಾರೆ. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ವಾಹಕವು ಜೋತು ಬಿದ್ದಿರುವ ಕಡೆಗಳಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಕಾಮಗಾರಿ ಕೈಗೊಳ್ಳಲು ತಿಳಿಸಲಾಯಿತು. |
| 7 | ಲಿಂಗರಾಜು, ಹನೂರು | ಮನೆಯ ಮೇಲೆ ವಿದ್ಯುತ್ ಮಾರ್ಗವು ಹಾದು ಹೋಗಿದ್ದು ಬದಲಾವಣೆ ಮಾಡಲು ಕೋರಿರುತ್ತಾರೆ. | ಕವರ್ಡ್ ಕಂಡಕ್ಟರ್‌ನಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿಕೊಡಲಾಗುವುದು ಹಾಗೂ ಸದರಿ ಗ್ರಾಹಕರು ಸ್ವಂತ ಖರ್ಚಿನಲ್ಲಿ ವಿದ್ಯುತ್ ಮಾರ್ಗವನ್ನು ಬದಲಾಯಿಸಿಕೊಳ್ಳಲು ತಿಳಿಸಲಾಯಿತು. |

| | | | |
|---|---|---|---|
| 8 | ಸತೀಶ್, ಎಂ.ಟಿ.ದೊಡ್ಡಿ | UNIP ಯೋಜನೆಯಲ್ಲಿ ನೀರಾವರಿ ಪಂಪುಸೆಟ್ಟಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲವೆಂದು ದೂರಿರುತ್ತಾರೆ. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ವಿದ್ಯುತ್ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಕ್ತ ನಿರ್ದೇಶನ ನೀಡುವುದಾಗಿ ತಿಳಿಸಲಾಯಿತು. |
| 9 | ವೆಂಕಟೇಶ್, ಹನೂರು | ಹನೂರು ಪಟ್ಟಣದ ಜಿ.ವಿ.ಗೌಡ ಕಾಲೇಜಿನ ಹತ್ತಿರ ವೋಲ್ಟೇಜ್ ತುಂಬಾ ಕಡಿಮೆ ಇದ್ದು ಸರಿಪಡಿಸಲು ಕೋರಿರುತ್ತಾರೆ. | ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| 10 | ಕರಿಯಪ್ಪ, ಚಂಗಡಿ | ನಿಗಮದ ವತಿಯಿಂದ ಎಲ್.ಇ.ಡಿ.ಬಲ್ಬುಗಳನ್ನು ವಿತರಿಸಲು ಕೋರಿರುತ್ತಾರೆ. | ಪ್ರಸ್ತುತ ಎಲ್.ಇ.ಡಿ ಬಲ್ಬುಗಳ ಲಭ್ಯತೆ ಇಲ್ಲದಿರುವುದು ಮುಂದಿನ ದಿನಗಳಲ್ಲಿ ಹನೂರು ಕಛೇರಿಯಲ್ಲಿ ಎಲ್.ಇ.ಡಿ. ಬಲ್ಬು ಹಾಗೂ ಫ್ಯಾನ್‌ನನ್ನು ವಿತರಿಸಲಾಗುವುದು ಎಂದು ತಿಳಿಸಲಾಯಿತು. |
| 11 | ನಾಗರಾಜು, ಅಜ್ಜೀಪುರ | ಅಜ್ಜೀಪುರದ ಭಾಗದಲ್ಲಿ ಇದುವರೆವಿಗೂ ನಿರಂತರ ಜ್ಯೋತಿ ಯೋಜನೆಯ ವಿದ್ಯುತ್ ಸರಬರಾಜು ನೀಡಿರುವುದಿಲ್ಲ, ಕ್ರಮ ಕೈಗೊಳ್ಳಲು ಕೋರಿರುತ್ತಾರೆ. | ಪ್ರಸ್ತುತ ಅಜ್ಜೀಪುರದ ಭಾಗಗಳಲ್ಲಿ ನಿರಂತರ ಯೋಜನೆಯಲ್ಲಿ ವಿದ್ಯುತ್ ಸರಬರಾಜು ನೀಡಲು ಕಾಮಗಾರಿಯು ಪೂರ್ಣಗೊಂಡಿದ್ದು ಉಪ ವಿದ್ಯುತ್ ಪರಿವೀಕ್ಷಕರ ಅನುಮತಿಯನ್ನು ಪಡೆದ ನಂತರ ನಿರಂತರ ಜ್ಯೋತಿ ವಿದ್ಯುತ್ ಮಾರ್ಗವನ್ನು ಚಾಲನೆಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. |
| 12 | ನಾರಾಯಣನಾಯಕ, ಅಜ್ಜೀಪುರ | H3L-4072 ಕ್ಕೆ ಬಿಲ್ಲು ನೀಡಿರುವುದಿಲ್ಲ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. | H3L-4072 ಕ್ಕೆ ಮುಂದಿನ ಮಾಹೆಗಳಲ್ಲಿ ತಪ್ಪದೆ ಬಿಲ್ಲು ನೀಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |

ತಮ್ಮ ವಿಶ್ವಾಸಿ,

8/6/17

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಕೊಳ್ಳೇಗಾಲ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಹನೂರು ಉಪವಿಭಾಗ ರವರ ಮಾಹಿಗಾಗಿ.
7. ಹಿಆಸ/ಪ್ರಕ/ಕಡತ.